C.C. 1517/2022 PW1

ದಿನಾಂಕಃ 04.04.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ.ಡಿ ., ವಕೀಲರಿಂದಃ</u>

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಹಿಯನ್ನು ಅಷ್ಟೇ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ಅರೋಪಿಯು ದರ್ಜಿ ಕೆಲಸ ಮಾಡುತ್ತಿದ್ದು ಅವರ ಅಂಗಡಿಗೆ ಹೋಗಿ ಬರುವುದು ಮಾಡುತ್ತಿದ್ದೆ ಹಾಗೂ ನನ್ನ ಚಿಕ್ಕಪ್ಪನ ಮಗನ ಜೈರಾಜ್ ಸ್ನೇಹಿತರು ಹಾಗಾಗಿ ನನಗೆ ಆರೋಪಿ **10** ವರ್ಷಗಳಿಂದ ಪರಿಚಯ. ನನ್ನ ತಮ್ಮ ಜೈರಾಜ್ ಇವತ್ತು ಕೂಡ ನನ್ನ ಜೊತೆ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ. ಆರೋಪಿಯು ಹಲಸಿನಮರ ದೊಡ್ಡಿ ಗ್ರಾಮದಲ್ಲಿ ಸ್ವಂತ ಅಂಗಡಿ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಕೆಲಸಗಾರರು ಸಹ ಅಂಗಡಿಯಲ್ಲಿ ಇಟ್ಟುಕೊಂಡಿದ್ದಾರೆ. ಆರೋಪಿ ಆರ್ಥಿಕ ಸ್ದಿತಿ ಚನ್ನಾಗಿದೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ **2** ವರೆ ಎಕರೆ ಜಮೀನು ಇದೆ. ವ್ಯವಸಾಯವನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನನಗೆ ವಾರ್ಷಿಕವಾಗಿ ಸೀಮೆ ಹಸುವಿನಿಂದ, ರೇಷ್ಮೆ ಬೆಳೆ, ತೆಂಗಿನ ಕಾಯಿಂದ ಒಟ್ಟು **3** ಲಕ್ಷ ಆದಾಯ ಇದೆ. ಹಾಲಿನ ಬಿಲ್ಲು ಮತ್ತು ರೇಷ್ಮೆ ಬೆಳೆಯ ಆದಾಯ ನನ್ನ ಖಾತೆಗೆ ಜಮಾ ಆಗುತ್ತದೆ. ಸುಮಾರು **75** ತೆಂಗಿನ ಮರಗಳು ಇವೆ. **2020** ನೇ ಸಾಲಿನ ನನ್ನ ಬ್ಯಾಂಕ್ ಖಾತೆಯ ಪುಸ್ತಕ ಮತ್ತು ಜಮೀನಿನ ಪಹಣಿ ಪತ್ರಿಕೆಗಳು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಯಾವುದೇ ಬಡ್ಡಿ ವ್ಯವಹಾರ ಮಾಡುವುದಿಲ್ಲ.

ನಾನು ಆರೋಪಿಗೆ **9** ಲಕ್ಷ ದ ಹಣ ನೀಡುವಷ್ಟು ನಿಮ್ಮ ಬಳಿ ಇತ್ತು ಎಂದು ತೋರಿಸಲು ಎಂದರೆ ಸಾಕ್ಷಿ ನಾನು ಆರೋಪಿಗೆ **9** ಲಕ್ಷ ರೂ ಒಂದೇ ಬಾರಿ ಕೊಟ್ಟಿಲ್ಲ. ಮುಂದುವರೆದು ನಾನು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. **2020** ಇಸವಿಯ **5** ನೇ ತಿಂಗಳಲ್ಲಿ ಆರೋಪಿಗೆ ನಾನು **9** ಲಕ್ಷ ನೀಡಿದ್ದೇನೆ ದಿನಾಂಕ ನನಗೆ ನೆನಪಿಲ್ಲ. ನಂತರ ಒಂದುವರೆ ಅಥವಾ ಎಡರು ತಿಂಗಳು ಬಿಟ್ಟು ಮತ್ತೆ **2** ಲಕ್ಷ ರೂ ಆರೋಪಿಗೆ ಕೊಟ್ಟಿದ್ದೇನೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣ ಪತ್ರದಲ್ಲಿ

ಹೇಳಿದ್ದೇನೆ. ಸಾಕ್ಷಿ ಮುಂದುವರೆದು ಹಂತ ಹಂತವಾಗಿ ಕೊಟ್ಟಿದ್ದೇನೆ ಎಂದು ಹೇಳಿ ಬರೆಸಿದ್ದೇನೆ. ಮನೆ ನಿರ್ವಹಣಕ್ಕೆ ತಿಂಗಳಿಗೆ **2** ರಿಂದ **3** ಸಾವಿರ ಖರ್ಚು ಆಗುತ್ತದೆ.

ಆರೋಪಿಗೆ ನಾನು ಹಣ ನೀಡುವ ಸಂದರ್ಭದಲ್ಲಿ ಯಾವುದೇ ದಾಖಲಾತಿಗಳು ಬರೆಸಿಕೊಂಡಿಲ್ಲ , ನಂಬಿಕೆ ಮೇಲೆ ನಾನು ಹಣ ನೀಡಿದ್ದೇನೆ. ನನ್ನ ಬಳಿ ಚಕ್ ಪುಸ್ತಕ ಇದೆ. ನಾನು ಕರ್ನಾಟಕ ಬ್ಯಾಂಕ್, ಎಸ್.ಬಿ.ಐ. ಮತ್ತು ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಸದರಿ ಬ್ಯಾಂಕ್ ಖಾತೆಯ ಪುಸ್ತಕಗಳನ್ನು ನಾನು ಹಾಜರು ಪಡಿಸುತ್ತೇನೆ. ಸಾಕ್ಷಿ ಮುಂದುವರೆದು ನಾನು ನನ್ನ ಬಳಿ ಇದ್ದ ಹಣವನ್ನು ಆರೋಪಿಗೆ ಸಾಲವಾಗಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಗೆ ಬ್ಯಾಂಕ್ ಮೂಲಕ ಅಂದರೆ ಚಕ್ ಅಥವಾ ಡಿ.ಡಿ. ಮೂಲಕ ಹಣ ನೀಡಲು ಯಾವುದೇ ತೊಂದರೆ ಇರಲಿಲ್ಲ.

ಒಂದು ವೇಳೆ ಆರೋಪಿಗೆ ನಾನು ಹಣ ನೀಡಿದ್ದೇ ಆದಲ್ಲಿ ಪ್ರೋನೋಟ್ ಅಥವಾ ಕರಾರು ಪತ್ರ ಬರೆಸಿಕೊಳ್ಳಲು ನಿಮಗೆ ತೊಂದರೆ ಇತ್ತೆ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ನಂಬಿಕೆಯಿಂದ ಹಣ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಯಾವುದೇ ಹಣವನ್ನು ಆರೋಪಿಗೆ ನೀಡದೇ ಇರುವ ಕಾರಣ ಪ್ರೋನೋಟ್ ಅಥವಾ ಕರಾರು ಪತ್ರ ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅವರು ಅಂಗಡಿಯನ್ನು ಅಭಿವೃದ್ಧಿ ಮಾಡುವ ಸಲುವಾಗಿ ಪಡೆದುಕೊಂಡಿದ್ದರು. ಅವರ ಅಂಗಡಿ ಹೆಸರು ನನಗೆ ಗೊತ್ತಿಲ್ಲ. ನಿ.ಪಿ **1** ನ್ನು ಆರೋಪಿಯು ನೀಡಿದ್ದು ನನಗೆ ನಿ.ಪಿ.**1** ನ್ನು ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ನಿ.ಪಿ**1** ನ್ನು ನನ್ನ ಸಮ್ಮ ಜೈರಾಜ್ ರವರ ಮನೆಯಲ್ಲಿ ನೀಡಿದ್ದು ಆರೋಪಿ ಮತ್ತೆ **3** ಲಕ್ಷ ಕೇಳಿದ್ದು ಮತ್ತು ನನ್ನ ತಮ್ಮ ಜೈರಾಜ್ ಮೂಲಕ **2020 , 9** ನೇ ತಿಂಗಳಲ್ಲಿ **3** ಲಕ್ಷ ಹಣ ಕಳಿಸಿಕೊಟ್ಟಿದ್ದೆ. ಒಟ್ಟು **9** ಲಕ್ಷ ಆಗಿದ ನನ್ನ ಬಳಿ ಒಂದು ಸೈಟ್ ಅದನ್ನು ನಿಮಗೆ ಮಾಡಿ ಕೊಡುತ್ತೇನೆ ಎಂದು ಸಹ ಆರೋಪಿ ಹೇಳಿದ್ದರು. ಸೈಟ್ ನ ಸಂಖ್ಯೆ ನನಗೆ ಗೊತ್ತಿಲ್ಲ. ಆದರೆ ಅದು ಮಹದೇಶ್ವರ ನಗರದಲ್ಲಿ ಇದೆ. ಸದರಿ ಸೈಟಿನ ದಾಖಲಾತಿಗಳನ್ನು ನಾನು ನೋಡಿಲ್ಲ. ನಿ.ಪಿ.**1** ನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ನಿ.ಪಿ **1** ರಲ್ಲಿರು ಒಬ್ಬ ವ್ಯಕ್ತಿ ಒಂದೇ ಪೆನ್ನಿನಿಂದ ಬರೆದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿ ನನ್ನ ಮುದೆಯೇ ನಿ.ಪಿ**1** ನ್ನು ಬರೆದು ಕೊಟ್ಟರು ಯಾವ ಪೆನ್ನು ಎಂದು ನನಗೆ ಗೊತ್ತಿಲ್ಲ. ನಿ.ಪಿ **1** ರಲ್ಲಿರುವ ಒಕ್ಕಣೆ ಮತ್ತು ಸಹಿ ಆರೋಪಿಯ ದಲ್ಲ ಎಂದರೆ ಸರಿಯಲ್ಲ. ನಿಪಿ.**1** ರಲ್ಲಿ ನಮೂದು ಮಾಡಿರುವ **9** ಲಕ್ಷದಲ್ಲಿ **9** ಎಂಬ ಅಕ್ಷರವನ್ನು ತಿದ್ದಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ನಿ.ಪಿ. 1 ರಲ್ಲಿ ನನಗೆ ಅನುಕೂಲವಾಗುವಂತೆ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿ 08.03.2020 ರಿಂದ ಒಂದು-ಒಂದುವರೆ ವರ್ಷಗಳ ಕಾಲ ಲಾಕ್ ಡೌನ್ ಇತ್ತು ಎಂದರೆ ಸಾಕ್ಷಿ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಲಾಕ್ ಡೌನ್ ಇತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಯಾವುದೇ ವ್ಯಾಪಾರ ವಹಿವಾಟು ನಡೆಯುತ್ತಿರಲಿಲ್ಲ ಎಂದರೆ ಸರಿ. ಆರೋಪಿಗೆ ನಾನು 9 ಲಕ್ಷ ರೂ ಸಾಲ ನೀಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.